ನೋಟಕ್ಕೆ ಚಿಲಕ ಸಿಕ್ಕಿಸಿದಂತೆಯೇ ಕಾಣುತ್ತದೆ! ಹೊರಗಿನಿಂದ ಯಾರಾದರೂ ಬಾಗಿಲನ್ನು ಬಲವಾಗಿ ಎಳೆದರೆ, ಅಗಳಿ ರಂಧ್ರಕ್ಕೆ ಸಿಕ್ಕಿಸಿದಂತೆಯೆ, ಬಾಗಿಲು ತೆಗೆಯಲ್ಪಡುತ್ತದೆ! ತಮ್ಮುವಿಗೆ ಇದು ಗೊತ್ತಿತ್ತು. ಆತ ಬಂದು, ಕಿಟಕಿಯ ಬಾಗಿಲು ತೆಗೆದು, ಫೈಲು ಇರಿಸಿದ."

"ಆದರೆ, ಕಿಟಕಿಯ ಚಿಲಕ ಹಾಕಿಯೇ ಇತ್ತಲ್ಲ, ನಾವು ನೋಡುವಾಗ?" ನಾಗರಾಜು ಕೇಳಿದ.

"ಅದು ಸುಲಭ. ಚಿಲಕದ ಹುಕ್‌ನ್ನು ಮತ್ತೆ ತಿರುಗಿಸಿ ಹಾಕಿ, ಚಿಲಕವನ್ನು ತುಸು ಮೇಲೆ ಸರಿಸಿದ ಸ್ಥಿತಿಯಲ್ಲಿ ಇರಿಸಿ, ಜೋರಾಗಿ ಹಾಕಿದಾಗ, ಅದು ತಟ್ಟನೆ ಜಾರಿ ದಾರಂದದ ರಂಧ್ರದೊಳಗೆ ಬೀಳುತ್ತೆ. ತುಸು ಕಷ್ಟ ಪಡಬೇಕಾಗಬಹುದು ಅಷ್ಟೇ."

"ಆದರೆ ಆ ಹುಕ್ ತೆಗೆದದ್ದು ಯಾರು?"

"ಮರದ ಕೆಲಸ ಗೊತ್ತಿರುವಂತಹ ವ್ಯಕ್ತಿ!"

"ನೀಲಮ್ಮ! ಆಕೆ ಗಂಡನಿಗೆ ಮನೆಯಲ್ಲಿ ಮರದ ಕೆಲಸಕ್ಕೆ ಸಹಾಯ ಮಾಡುತ್ತಾಳೆ!! ಆದರೆ, ಒಂದು ಅನುಮಾನ, ಸಾರ್. ಆಕೆ ಕಿಟಕಿಯ ಚಿಲಕ ತೆಗೆದಿರಿಸಿಯೇ ಹೋಗಬಹುದಿತ್ತಲ್ಲ?" ನಾಗರಾಜು ಉದ್ಗರಿಸಿದ.

"ಅದಕ್ಕೊಂದು ತೊಂದರೆಯಿತ್ತು. ನೀವು ಕೆಲವೊಮ್ಮೆ ಹತ್ತು ಗಂಟೆಯ ಹೊತ್ತಿಗೆ ಮನೆಗೆ ಬರುವ ವಿಷಯ ಗೊತ್ತಿತ್ತು. ಫೈಲು ಇಡುವ ಮೊದಲೇ ನೀವು ಬಂದರೆ, ಕಿಟಕಿ ತೆರೆದಿರುವುದನ್ನು ಕಂಡರೆ ಕಷ್ಟ. ಜೊತೆಗೆ, ಚಿಲಕ ಪೂರ್ತಿ ತೆಗೆದಿರಿಸಿದರೆ, ಬಾಗಿಲು ತೆರೆದುಕೊಳ್ಳುವ ಅಪಾಯವಿತ್ತಲ್ಲವೇ?"

"ನೀಲಮ್ಮ ಫೈಲು ಮೊದಲೇ ಇತ್ತು ಅಂತ ಹೇಳಿದ್ದಳಲ್ಲ!" ನಾನು ಮಧ್ಯೆ ಮಾತು ಸೇರಿಸಿದೆ.

"ಕರೆಕ್ಟ್, ಬಿದ್ದಪ್ಪ, ಫೈಲು ಮೊದಲೇ ಇತ್ತು. ತಮ್ಮು ಬಂದವನು ಅದೇ ಫೈಲಿನಲ್ಲಿದ್ದ ಕಾಗದಗಳನ್ನು ತೆಗೆದು, ಬಿಡ್‌ನ ಕಾಗದಗಳನ್ನು ಇರಿಸಿದ, ಅಷ್ಟೇ! ಅಲ್ವೇ, ನಾಗರಾಜು?" ಕರಮಚಂದ ನಾಗರಾಜುವಿನ ಮುಖ ನೋಡಿದ.

ಆತ ಹೌದೆನ್ನುವಂತೆ ತಲೆ ಆಡಿಸಿದ.

"ಹಾಗಿದ್ದರೆ, ಇವರಿಬ್ಬರೂ ಸೇರಿ, ನಮ್ಮ ಬಿಡ್‌ನ ದಾಖಲೆಯನ್ನು ಪ್ರತಿಸ್ಪರ್ಧಿಗಳಿಗೆ ಕೊಡುತ್ತಿದ್ದರೆ?" ನಂಬಿಕೆ ಬಾರದವನಂತೆ ಮುತ್ತಪ್ಪ ಪ್ರಶ್ನಿಸಿದ.

"ಮುತ್ತಪ್ಪ, ಇವರು ಕೇವಲ ಪಾತ್ರಧಾರಿಗಳು. ಸೂತ್ರಧಾರಿ ಬೇರೆಯೇ ಇದ್ದಾನೆ" ಕರಮಚಂದ ಹೇಳಿದಾಗ ಎಲ್ಲರ ಕಣ್ಣುಗಳೂ ಸುಬ್ಬಯ್ಯನತ್ತ ಹೊರಳಿದವು.

"ಇಲ್ಲ, ಸಾರ್. ನಾನೇನೂ ಮಾಡಿಲ್ಲ. ಸುಮ್ನೆ ಹೇಳ್ಬೇಡಿ." ಸುಬ್ಬಯ್ಯ ತಡವರಿಸಿದ.

"ಏಯ್! ನೀನು ಇಂತಹ ಹಲ್ಕಾ ಕೆಲ್ಸ ಮಾಡ್ತಿ ಅಂತ ನಮ್ಗೆ ಮೊದಲೇ ಅನುಮಾನವಿತ್ತು! ಈಡಿಯಟ್!!" ಪ್ರವೀಣ ಗದರಿದ.

"ಕ್ಷಮಿಸಿ! ಆತುರಪಡಬೇಡಿ. ಸುಬ್ಬಯ್ಯನದ್ದೇನೂ ಇದರಲ್ಲಿ ಪಾತ್ರವಿಲ್ಲ. ಯಾಕೆ ಹೇಳಿ? ನೀವು ಇವರಿಬ್ಬರನ್ನು ಪರೀಕ್ಷಿಸುವ ನಿರ್ಧಾರ ಮಾಡಿದ್ದು ಯಾವಾಗ? ನಿನ್ನೆ ರಾತ್ರಿ. ಅದು ಆತನಿಗೆ ಗೊತ್ತೇ ಇರಲಿಲ್ಲ. ಈ ದಿನ ಬೆಳಗ್ಗೆ, ನೀವು ತನಿಖೆ ಆರಂಭ ಮಾಡಿದ ಹೊತ್ತಿನಿಂದ ಆತ ನಿಮ್ಮ ಜೊತೆಗೇ ಇದ್ದನಲ್ಲವೇ? ಆತ ತಮ್ಮು, ನೀಲಮ್ಮನಿಗೆ ಹೇಳಿ, ಈ ರೀತಿ ಫೈಲು ಇರಿಸುವ ವ್ಯವಸ್ಥೆ ಮಾಡಿಸುವುದು ಹೇಗೆ? ಅದು ಅಸಾಧ್ಯ. ಹಾಗಾಗಿ, ಇದರಲ್ಲಿ ಆತನ ಪಾತ್ರವಿರಲು ಸಾಧ್ಯವಿಲ್ಲವೆಂದು ನಾನು ಆಗಲೇ ತರ್ಕಿಸಿದ್ದೆ."

"ಹಾಗಿದ್ದರೆ ಯಾರು ಸೂತ್ರಧಾರಿ?" ಮುತ್ತಪ್ಪನ ಮೊಗದಲ್ಲಿ ಕುತೂಹಲ ತುಂಬಿತ್ತು.

"ಮುತ್ತಪ್ಪ, ನಿಮ್ಮ ಬ್ಯಾಲೆನ್ಸ್‌ಶೀಟ್ ನೋಡಿದಾಗ, ನನಗೆ ಕೆಲವು ವಿಷಯಗಳು ಗೊತ್ತಾದವು. ಮೊದಲನೆಯದ್ದು, ನಿಮ್ಮ ಪಾಲುದಾರಿಕೆಯಲ್ಲಿ ನಿಮ್ಮ ಪಾಲು ಶೇಕಡಾ ತೊಂಬತ್ತು, ಪ್ರವೀಣರದ್ದು